**ಅ. ದಾ. ಸಂ : 324/2015**
**ಡಿ .ಡಬ್ಲ್ಯೂ : 01**

**ದಿನಾಂಕ : 11-04-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು:- ವಾದಿಯ** ಪರ ಶ್ರೀ. ಟಿ ಕೆ ಹೆಚ್ ,ವಕೀಲರಿಂದ :-

6 ನೇ ಪ್ರತಿವಾದಿಗೆ ವಾದಿಗಳು ಸಿದ್ದನಂಜಯ್ಯ ನವರ ಮಕ್ಕಳು ಎಂಬ ವಿಷಯದ ಬಗ್ಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ವಾದಿಗಳು ನಿಪಿ-1 ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ ಮತ್ತು ಅದರಲ್ಲಿರುವ ವಿಷಯದ ಬಗ್ಗೆ ನನಗೆ ಮಾಹಿತಿ ಇದೆ. ನಿಪಿ-1 ರಲ್ಲಿ ಸಿದ್ದನಂಜಪ್ಪನವರ ಮೊದಲನೇ ಹೆಂಡತಿ ಪುಟ್ಟಮ್ಮ ಮತ್ತು 2 ನೇ ಹೆಂಡತಿ ಸಿದ್ದಲಿಂಗಮ್ಮ ಎಂದು ನಮೂದಾಗಿದೆ ಎಂದರೆ ಸರಿ. ಅದೇ ರೀತಿ ಸಿದ್ದಲಿಂಗಮ್ಮನವರ ಮಕ್ಕಳು ಹೆಸರು ಸಹ ನಿಪಿ-1 ರಲ್ಲಿ ನಮೂದಾಗಿದೆ. ನಾನು ವಾದಿಗಳ ತಂದೆ-ತಾಯಿ ಯಾರು ಎಂದು ಈಗಿನವರೆಗೂ ತಿಳಿದುಕೊಂಡಿಲ್ಲ. ನನಗೆ ಸಿದ್ದನಂಜಪ್ಪನವರ ಕುಟುಂಬ ಮತ್ತು ವಂಶವೃಕ್ಷದ ಬಗ್ಗೆ ದಿನಾಂಕ 22-08-2005 ರಂದೇ ಮಾಹಿತಿ ಇತ್ತು ಎಂದರೆ ಸರಿಯಲ್ಲ. ನನಗೆ ವಾದಿಗಳ ಕುಟುಂಬದ ಬಗ್ಗೆ ಮಾಹಿತಿ ಇದ್ದರು ಸಹ ಅವರ ಗಮನಕ್ಕೆ ತರದಂತೆ ನಿಡಿ-2 ಅನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ವಾದಿಗಳಿಗೆ ದಾವಾಸ್ವತ್ತಿನಲ್ಲಿ ಆಬಾದಿತ ಹಕ್ಕು ಇದೆ ಎಂದರೆ ಸಾಕ್ಷಿಯು ಅದು ಸಿದ್ದನಂಜಯ್ಯನವರ ಸ್ವಂತ ಸ್ವತ್ತು ಎಂದು

ನುಡಿಯುತ್ತಾರೆ. ನಾನು ದಾವಾಸ್ವತ್ತು ಸಿದ್ದನಂಜಯ್ಯನವರ ಸ್ವಂತ ಸ್ವತ್ತು ಎಂದು ಹೇಳಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ.ಸಿ.ಜ. ಮತ್ತು ಜೆ.ಎಂ.ಎಫ್.ಸಿ, ಮಾಗಡಿ.**